ಪದಬಂಧ



ಎಡದಿಂದ ಬಲಕ್ಕೆ:

1. ಎಂಥ ಬಂಧನ, ಈ ನೆಂಟಸ್ತನ! (3)
3. ಆತನ ಕನಸುಗಳಿಗೆ ಕೊನೆಯೇ ಇಲ್ಲ, ಬಿಡಿ (3)
4. ವಿದ್ವತ್ತಿನ ಪ್ರದರ್ಶನಕ್ಕೂ ಒಂದು ಕ್ರಮ ಇದೆ (3)
6. ಭೀಕರ ದೃಶ್ಯಗಳಿಗೆ ಸಾಕ್ಷಿಯಾದ ಸಭಾಸದ (3)
7. ಪಂಥಕ್ಕೆ ಮುಂದಾದ ಕೆಲಸ ಮೊದಲಿನದು, ಪ್ರಾರಂಭದ್ದು (4)
9. 'ಕಾಡಿನಲ್ಲಿ ಜೀವಿಸುವವ'ನಿಗೆ ಒಂದು ಪ್ರಸಿದ್ಧ ಊರು (4)
11. ಜವಳಿಯೆಲ್ಲ ಆಮೇಲೆ ಮೊದಲು ಸಮಾರಂಭದ ಸಾಮಗ್ರಿ ಬರಲಿ (4)
13. ತಟ್ಟುವ ಕುಟ್ಟುವ ಕೆಲಸಗಳಲ್ಲೂ ಭಾರೀ ಮೋಸ! (4)
15. ಗುಂಟೂರಿನಲ್ಲೊಂದು ಭಾರೀ ಚರಂಡಿ (3)
17. ಗಣ್ಯರಿಗೆಂದು ತಂದದ್ದು ಈ ಖಡ್ಗನಿರೋಧಕ ಕವಚ (3)
18. ಜೋರು ಮಾಡುವವರನ್ನು ದೂರವಿರಿಸುವುದು ತುಂಬ ತುರ್ತು (3)
19. ಜೇನಿನಂಥ ಪ್ರೀತಿ ಹರಿಸುವವಳು ತಾಯಿ ತಾನೇ? (3)

ಮೇಲಿಂದ ಕೆಳಕ್ಕೆ:

1. ಸತಾಯಿಸುವುದರಲ್ಲೇ ಆತನಿಗೆ ಆನಂದ (3)
2. ಕದನಕ್ಕೇಕೆ ಇಳಿದ ಆ ಶ್ರೀಮಂತ? (3)
3. ಅಷ್ಟೇ, ಮತ್ತೇನು? ಅದು ಪಕ್ಷದ ಎಂಟನೇ ದಿನ (3)
5. ನಳನಳಿಸುವ ಸೌಂದರ್ಯದ ತಾವರೆ ನೋಡಿ (3)
7. ಪ್ರಾರ್ಥನೆಗೆ ತಕ್ಕ ಸಮಯ-ಬೆಳಗು (4)
8. ಕೂಡಲೇ ಮರೆಯಾದದ್ದು ಸಾಗರ ಸರೀಸೃಪ (4)
9. ವಲ್ಲಭನಂತೆ ನಟಿಸಬೇಕೆಂದು ಒತ್ತಾಯ (4)
10. ಎಲ್ಲವನ್ನೂ ಕೆಡಿಸಿಟ್ಟದ್ದು ಕೋಪದ ಕೂಗಾಟ (4)
12. ಜಾಗರೂಕತೆ ಇರಲಿ ಪಕ್ಕಕ್ಕೆ ಸರಿ (3)
14. ಗಟ್ಟಿಯಾಗಿ ನಿಂತಿರು, ಗಂಡು ಕುರಿ ಬಂದೀತು (3)
15. ಜಾಣನಿಗೆ ಗೊತ್ತು, ಖನಿಜ ಹೀಗೂ ಇದ್ದೀತು (3)
16. ನೀರಜದ ಚಿತ್ರದಲ್ಲೇ ಆಕಾಶವೂ ಕಾಣಿಸಿತೇ? (3)

### ಪದಬಂಧ 25-10-2012 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಉದ್ದೀಪನ; 3. ಹರಸು; 4. ವಿಕೃತಿ; 6. ತರಾತುರಿ; 8. ಪ್ರಕಟಿಸು 10. ಅನುರಕ್ತಿ; 12. ನಮಸ್ಕಾರ; 16. ತರುಣ; 17. ವತ್ಸರ =ಸಂವತ್ಸರ) 18. ತಿರೋಧಾನ.

ಮೇಲಿಂದ ಕೆಳಕ್ಕೆ: 1. ಉಸುಕು; 2. ನಜರು; 3. ಹಳತು; 5. ತಿರುಕ; 6. 'ತಮ್ಮಸಅ' ('ಅಸಮ್ಮತ' ತಲೆ ಕೆಳಗು); 7. ರಿಣಮುಕ್ತಿ; 8. ಪ್ರವಚನ; 9. ಸುಧಾಕರ; 11. ರಹಿತ; 13. ಮಧುರ; 14. ಆಣತಿ; 15. ಯವನ.

# ಪ್ರಶ್ನಾಂಕಣ

## ಬಿಗ್ ಬ್ಯಾಂಗ್- ಅದೇನು?

ಬಿಗ್ ಬ್ಯಾಂಗ್ ಎಂದರೆ 'ಮಹಾಸ್ಫೋಟ' ಎಂದರ್ಥ. ಆದರೆ ವಿಶ್ವದ ಉಗಮಕ್ಕೆ ಮೂಲ ಕಾರಣವಾದ ವಿಶಿಷ್ಟ ವಿದ್ಯಮಾನದ ಹೆಸರಾಗಿಯೇ ಇದು ಸುಪ್ರಸಿದ್ಧ. ಆ ವಿದ್ಯಮಾನವನ್ನು ನಿರೂಪಿಸುವ ವೈಜ್ಞಾನಿಕ ಸಿದ್ಧಾಂತದ ಹೆಸರು 'ದಿ ಬಿಗ್ ಬ್ಯಾಂಗ್ ಥಿಯರಿ' (ಮಹಾಸ್ಫೋಟ ಸಿದ್ಧಾಂತ).

ಇಸವಿ 1925ರ ಸುಮಾರಿಗೆ ಆಗಿನ ಖಗೋಳ ವಿಜ್ಞಾನಿಗಳು ವಿಶ್ವದಲ್ಲಿನ ಸಕಲ 'ಗ್ಯಾಲಕ್ಸಿ'ಗಳೂ ನಮ್ಮಿಂದ ನಿರಂತರ ದೂರ ದೂರ ಸರಿಯುತ್ತಿರುವುದನ್ನು ಗುರುತಿಸಿದ್ದರು. ಆ ವೀಕ್ಷಣೆಯನ್ನು ಆಧರಿಸಿ ಆಗಿನ ಖ್ಯಾತ ವಿಜ್ಞಾನಿ 'ಜಾರ್ಜ್ ಎಡ್ವರ್ಡ್ ಲೆಮಾಯಿರ್' ವಿಶ್ವದ ಜನನ ಕುರಿತ ಒಂದು ಸಿದ್ಧಾಂತವನ್ನು ರೂಪಿಸಿದ. ಎಂದೋ ಬಹು ಪ್ರಾಚೀನ ಕಾಲದಲ್ಲಿ ವಿಶ್ವದ ಸರ್ವದ್ರವ್ಯವೂ ಒಟ್ಟಾಗಿದ್ದು, ಏಕೋ ಹೇಗೋ ಇದ್ದಕ್ಕಿದ್ದಂತೆ ಸಿಡಿದಂತೆ ಎಲ್ಲ ಕಡೆಗೂ ಚದರಿ ಹರಡಿ, ಹಾಗೆ ಎರಚಲ್ಪಟ್ಟ ದ್ರವ್ಯವೇ ಅಲ್ಲಲ್ಲಿ ಒಟ್ಟುಗೂಡಿ ತಾರೆಗಳು- ಗ್ಯಾಲಕ್ಸಿಗಳು ಮೈದಳೆದದ್ದು ಎಂದು ಪ್ರತಿಪಾದಿಸಿದ. ಅಲ್ಲಿಂದ ಸುಮಾರು ಇಪ್ಪತ್ತು ವರ್ಷಗಳ ನಂತರ ವಿಖ್ಯಾತ ಖಗೋಳ ವಿಜ್ಞಾನಿ 'ಫ್ರೆಡ್ ಹಾಯ್ಲ್' ವಿಶ್ವದ ಹುಟ್ಟಿನ ಬೇರೊಂದು ಸಿದ್ಧಾಂತವನ್ನು ಪ್ರತಿಪಾದಿಸಿದ. 'ಸ್ಥಿರ ಸ್ಥಿತಿ ಸಿದ್ಧಾಂತ' ಎಂಬ ಆ ಕಲ್ಪನೆ ಲೆಮಾಯಿರ್‌ನ ಸಿದ್ಧಾಂತಕ್ಕೆ ವಿರುದ್ಧವಾಗಿತ್ತು. ಆ ಸಿದ್ಧಾಂತವನ್ನು ಕಿಂಚಿತ್ತೂ ಒಪ್ಪದಿದ್ದ ಫ್ರೆಡ್ ಹಾಯ್ಲ್ ಅದನ್ನು ಹಾಸ್ಯ ಮಾಡಲು ವ್ಯಂಗ್ಯದ ಹೆಸರೊಂದನ್ನು ಹೆಣೆದ: 'ಬಿಗ್ ಬ್ಯಾಂಗ್.' ವಿಪರ್ಯಾಸ ಏನೆಂದರೆ ಅದೇ ಹೆಸರನ್ನೇ ಉಳಿಸಿಕೊಂಡು ಸಾಕಷ್ಟು ಆಧಾರಗಳನ್ನೂ ಗಳಿಸಿಕೊಂಡು ಗಟ್ಟಿಗೊಂಡ 'ಬಿಗ್ ಬ್ಯಾಂಗ್ ಥಿಯರಿ'ಯೇ ವಿಶ್ವದ ಜನನ ಕುರಿತ ಸತ್ಯ ಸಿದ್ಧಾಂತವಾಗಿ ಸದ್ಯದ ಜಗತ್ತಿನೆಲ್ಲೆಡೆ ಸ್ವೀಕೃತವಾಗಿದೆ.



'ಮಹಾಸ್ಫೋಟ ಸಿದ್ಧಾಂತ'ದ ಪ್ರಕಾರ ಈಗಿನ ಇಡೀ ವಿಶ್ವದ ಉಗಮಕ್ಕೆ ಮೂಲವಾದದ್ದು 'ಹಿಡಿ ಗಾತ್ರ'ವೂ ಇರದಿದ್ದ- ಅಷ್ಟರಲ್ಲೇ ಸರ್ವದ್ರವ್ಯವೂ ಅಡಕವಾಗಿದ್ದ- ಒಂದು ತುಣುಕು ದ್ರವ್ಯ. ಒಂದು ಅಡಿಯ ಒಂದು ದಶಲಕ್ಷದ ಒಂದಂಶದಷ್ಟೇ ವ್ಯಾಸ ಇದ್ದ ಆ ಅತಿ ವಿಶಿಷ್ಟ ದ್ರವ್ಯ ತುಣುಕಿನ ಸ್ಥಿತಿ, ಸಾಂದ್ರತೆ, ಸಂಯೋಜನೆ ಇತ್ಯಾದಿ ಎಲ್ಲ ಗುಣಗಳೂ ಅಜ್ಞಾತ. ಶಕ್ತಿ, ಕಾಲ, ಆಕಾಶ ಎಲ್ಲವೂ ಅದರಲ್ಲೇ ಬೆರೆತುಹೋಗಿದ್ದ ಸರ್ವಗುಣ ಸಂಗ್ರಹಿತ ಏಕಮೇವ ಸೃಷ್ಟಿ ಅದಾಗಿತ್ತು.

ಹಾಗಿದ್ದಾಗ ಈಗ್ಗೆ ಒಂದು ಸಾವಿರದ ಐದುನೂರು ಕೋಟಿ ವರ್ಷ ಹಿಂದೆ ಇದ್ದಕ್ಕಿದ್ದಂತೆ ಆ ಮೂಲದ್ರವ್ಯ ಚದರತೊಡಗಿತು. ಯಾವ ಕಲ್ಪನೆಗೂ ಎಟುಕದ ವೇಗದಲ್ಲಿ ಆರಂಭಗೊಂಡ ಆ ಕ್ರಿಯೆಯೇ 'ಬಿಗ್ ಬ್ಯಾಂಗ್'. ಸಿಡಿತ, ಸ್ಫೋಟ ಏನೂ ಇರದಿದ್ದ, ಪ್ರಶಾಂತವಾಗಿಯೇ ಮುನ್ನಡೆದ ಆ ಕ್ರಿಯೆಯಿಂದ ಪ್ರಸ್ತುತದ ವಿಶ್ವದ ಸ್ಥಿತಿ ವಿಕಸನಗೊಂಡದ್ದು... ಅದೇ ಬೇರೊಂದು ವಿಸ್ಮಯದ ಕಥೆ.

■ ಎನ್. ವಾಸುದೇವ್